ಫ್ಲಡ್ ಫ್ಲೋ ಕಾಲುವೆ ನಿರ್ಮಾಣ

924(1240); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)

ಅ) ಬಚಾವತ್ ಆಯೋಗದ ಆದೇಶ ಪ್ರಕಾರ ತುಂಗಭದ್ರಾ ಜಲಾಶಯದ 139 ಟಿ.ಎಂ.ಸಿ. ನೀರನ್ನು ಉಪಯೋಗಿಸಲು ರಾಜ್ಯಕ್ಕೆ ಹಕ್ಕಿದೆಯೇ;

ಆ) ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿರುವ 34 ಟಿ.ಎಂ.ಸಿ. ನೀರಿನಲ್ಲಿ 22 ಟಿ.ಎಂ.ಸಿ. ರಾಜ್ಯದ ನೀರಿನ ಹಕ್ಕಿದ್ದು ಆ ನೀರನ್ನು ಉಪಯೋಗಿಸಲು ಕಾನೂನು ತೊಡಕಿದೆಯೇ;

ಇ) ಕಾನೂನಿನ ತೊಡಕು ಇರದ 22 ಟಿ.ಎಂ.ಸಿ. ನೀರನ್ನು ಹೊಸ ಫ್ಲಡ್ ಫ್ಲೋ ಕಾಲುವೆ ಮಾಡಿ ಬಳಸಬಹುದೇ;

ಈ) ಹಾಗಿದ್ದಲ್ಲಿ, ಯಾವಾಗ ಫ್ಲಡ್ ಫ್ಲೋ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು?

ಶ್ರೀ M.B. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಹೌದು

ಆ) ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–Iರ (ಬಚಾವತ್ ನ್ಯಾಯಾಧಿಕರಣ) ವರದಿಯನುಸಾರ ತುಂಗಭದ್ರಾ ಯೋಜನೆಯು ಜಂಟಿ ಯೋಜನೆಯಾಗಿದೆ.

ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನಿಂದ ಕಡಿಮೆ ಆಗಿರುವ ನೀರಿನ ಪ್ರಮಾಣದ ಬಳಕೆಯು ಎಲ್ಲಾ ಸಂಬಂಧಿತ ರಾಜ್ಯಗಳಿಗೂ ಅನ್ವಯವಾಗುತ್ತಿದ್ದು, ಮೂಲ ಹಂಚಿಕೆಯಂತೆ ಉಪಯೋಗಿಸಲು, ಪರ್ಯಾಯಗಳ ಬಗ್ಗೆ ನಿರ್ಧಾರಕ್ಕೆ ಬರಬೇಕಾಗುತ್ತದೆ. ಮಾರ್ಗೋಪಾಯಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಮಧ್ಯೆ

ಒಪ್ಪಂದವಾಗಬೇಕಾಗುತ್ತದೆ ಮತ್ತು ತುಂಗಭದ್ರಾ ಮಂಡಳಿಯ ಅನುಮೋದನೆಬೇಕಾಗುತ್ತದೆ.

ಇ) ಮತ್ತು ಈ) ತುಂಗಭದ್ರಾ ಜಲಾಶಯವನ್ನು ಮೂಲ ಸಾಮರ್ಥ್ಯಕ್ಕೆ ಮರುಸ್ಥಾಪಿಸಲು ಪರ್ಯಾಯಗಳ ಬಗ್ಗೆ ಅಧ್ಯಯನ ನಡೆಸಿ, ಯೋಜನಾ ವರದಿಯನ್ನು ಸಿದ್ಧಪಡಿಸಲು Global Expression of Interest ನ್ನು ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ವಿವರವಾದ ಯೋಜನಾ ವರದಿ ಪಡೆದು ಪರಿಶೀಲಿಸಿ ಮುಂದಿನ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಪೋಡಿಮುಕ್ತ ಗ್ರಾಮಗಳನ್ನಾಗಿ ಮಾಡುವುದು

925(1952); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ಪೋಡಿ ಮುಕ್ತ ಗ್ರಾಮಗಳನ್ನು ಮಾಡುವ ಯೋಜನೆಯನ್ನು ಯಾವ ದಿನಾಂಕದಿಂದ ಜಾರಿಗೆ ತರಲಾಗಿದೆ.

ಆ) ಮಾಗಡಿ ತಾಲ್ಲೂಕಿನಲ್ಲಿ ಯಾವ್ಯಾವ ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳನ್ನಾಗಿ ಮಾಡಬೇಕಾಗಿರುತ್ತದೆ. (ಗ್ರಾಮಗಳ ವಿವರ ನೀಡುವುದು)

ಇ) ಹಾಗಿದ್ದಲ್ಲಿ, ಈಗಾಗಲೇ ಎಷ್ಟು ಮತ್ತು ಯಾವ್ಯಾವ ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳನ್ನಾಗಿ ಮಾಡಲಾಗಿದೆ.

ಈ) ಈಗ ಪೋಡಿ ಮುಕ್ತ ಗ್ರಾಮಕ್ಕೆ ಆಯ್ಕೆ ಮಾಡಿರುವ ಗ್ರಾಮಗಳಾವುವು;

ಉ) ಯಾವ ಕಾಲಮಿತಿಯಲ್ಲಿ ಈ ತಾಲ್ಲೂಕಿನ ಎಲ್ಲಾ ಗ್ರಾಮಗಳನ್ನು ಪೋಡಿ ಮುಕ್ತಗೊಳಿಸಲಾಗುವುದು?